ದಿನದ ಪಟ್ಟಿ.ಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಭೂಮಿಯ ಅತಿಕ್ರಮಣ

303 ಶ್ರೀ ಆರ್.ಎನ್. ನಾಯಕ್ (ಭಟ್ಕಳ್):– ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಜಮೀನು ಅತಿಕ್ರಮಣ ಮಾಡಿ ಸಾಗುವಳಿ ಮಾಡುವ ಎಷ್ಟು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿವೆ?

ಆ) 1978 ಕ್ಕಿಂತ ಹಿಂದೆ ಅತಿಕ್ರಮಣ ಮಾಡಿ ಸಾಗುವಳಿ ಮಾಡುತ್ತಿರುವವರನ್ನು ಅತಿಕ್ರಮಣ ಎಂದು ಸಕ್ರಮಗೊಳಿಸಲಾಗುವುದೇ, ಈ ಬಗ್ಗೆ ಸರ್ಕಾರದ ಕ್ರಮಗಳೇನು?

ಇ) ಭಟ್ಕಳ್ ತಾಲ್ಲೂಕಿನ ಪುರಸಭೆಯ ಸುತ್ತ ಮುತ್ತ ಜಾಲಿ, ವೆಂಕಟಪುರ ಮಂಡಳಿ ಗ್ರಾಮಗಳಲ್ಲಿ ಅತಿಕ್ರಮಣ ಪ್ರಕರಣಗಳ ಸಂಖ್ಯೆ ಎಷ್ಟು?

ಶ್ರೀ ಇ.ಟಿ. ಶಂಭುನಾಥ್.– (ಅರಣ್ಯ ರಾಜ್ಯ ಸಚಿವರು)

ಅ) 12,288 ಪ್ರಕರಣಗಳು

ಆ) 1978 ಕ್ಕಿಂತ ಹಿಂದಿನ ಅತಿಕ್ರಮಣ ಸಾಗುವಳಿಗಳನ್ನು ಸಕ್ರಮಗೊಳಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) 224 ಪ್ರಕರಣಗಳು

ಅರಣ್ಯ ಇಲಾಖೆಯ ಗಿಡಗಳನ್ನು ನೆಡುವ ಯೋಜನೆ

304 ಶ್ರೀ ಕೆ. ಹರ್ಷಕುಮಾರ್ ಗೌಡ (ಚಾಮರಾಜ):– ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:–

ಅ) ಮೈಸೂರು ನಗರದಲ್ಲಿ ಗಿಡ ನೆಡಲು ಅರಣ್ಯ ಇಲಾಖೆ ರೂಪಿಸಿರುವ ಯೋಜನೆಗಳೇನು?

ಆ) ಇಲ್ಲಿಯವರೆಗೆ ಈ ಕೆಲಸಕ್ಕಾಗಿ ಖರ್ಚು ಆಗಿರುವ ಹಣದ ಮೊತ್ತವೆಷ್ಟು?

ಇ) ಎಷ್ಟು ದಿನಗಳ ಒಳಗಾಗಿ ಈ ಯೋಜನೆಯನ್ನು ಕಾರ್ಯಗತಕ್ಕೆ ತರಲಾಗುವುದು?

ಶ್ರೀ ಇ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು) :–

ಅ) ಮೈಸೂರು ನಗರದಲ್ಲಿ ಗಿಡ ನೆಡಲು ಪ್ರತ್ಯೇಕ ಯೋಜನೆಗಳನ್ನು ರೂಪಿಸಿರುವುದಿಲ್ಲ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಧಿಯಿಂದ ಮೈಸೂರು ನಗರದ ರಸ್ತೆ ಬದಿಗಳಲ್ಲಿ ಗಿಡ ನೆಡುವುದು ಮತ್ತು ವೃಕ್ಷ ತೋಟಗಳನ್ನು ಅಭಿವೃದ್ಧಿಪಡಿಸುವುದು, ಈ ಕೆಲಸಗಳನ್ನು 1984 ರಿಂದಲೂ ಕಾರ್ಯಗತಗೊಳಿಸಲಾಗಿದೆ.